ಕೆಲವು ಕಡೆಗಳಲ್ಲಿ ಬೇಯಿಸಿದ ಕಾಬೂಲಿ ಕಡ್ಲೆಯ ಜೊತೆಗೋ, ಇಲ್ಲ ಸಾರುಮಾಡುವ ಕಡ್ಲೆಯ ಜೊತೆಯಲ್ಲಿ ಬೆರೆಸಿ ಕುಡುಕ ಮಹಾಪ್ರಭುಗಳ ಟೇಬಲ್‌ಗಳಿಗೆ ಸಾಗಿಸಲಾಗುತ್ತದೆ. ಕರ್ನಾಟಕದಲ್ಲಿ ಪ್ಯಾಕೇಟ್ ಸಾರಾಯಿ ನಿಷೇಧಕ್ಕೂ ಮೊದಲು ನನ್ನೂರಿನ ಸಾರಾಯಿ ಅಂಗಡಿಯ ತಂಗಚ್ಚಣ್ಣ ಮುಂಜಾನೆ ಮಾಂಸದಂಗಡಿಯಿಂದ ಪಾತ್ರೆಯಲ್ಲಿ ಹೆಪ್ಪುಗಟ್ಟಿದ ಮಿರಮಿರ ಮಿಂಚುವ ರಕ್ತವನ್ನು ಕೊಂಡುಹೋಗುವ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ.



ಮಂಗಳೂರು ವಿಶ್ವವಿದ್ಯಾ ನಿಲಯದಲ್ಲಿ ಎಂ.ಎ. ಮಾಡುವಾಗ ಬಿಸಿಎಂ ಹಾಸ್ಟೆಲ್‌ನ ಊಟವೇ ನನಗೆ ಮೃಷ್ಟಾನ್ನವಾಗಿತ್ತು. ಮಧ್ಯೆ ಮಧ್ಯೆ ಮೀನು ತಿನ್ನುವ ಆಸೆ ಬಂದರೆ ನಾವೆಲ್ಲರೂ ಓಡಿ ಹೋಗುತ್ತಿದ್ದದ್ದು ದೇಜು ಹೋಟೆಲ್‌ಗೆ. ದೇಜು ಎಂಬುದು ವ್ಯಕ್ತಿಯೊಬ್ಬರ ಹೆಸರು. ಸಣ್ಣ ಮನೆಯೊಂದರ ಮುಂಭಾಗದಲ್ಲಿ ಅಣ್ಣ ತಮ್ಮಂದಿರು ನಡೆಸುವ ಈ ಹೋಟೆಲ್‌ನಲ್ಲಿ ಬಾಳೆ ಎಲೆಯ ಮೇಲೆ ಬಡಿಸುವ ಕಜೆ ಕುಚುಲಕ್ಕಿಯ ಅನ್ನ, ಬಿಸಿಬಿಸಿ ಮೀನು ಸಾರು, ಗಸಿಯ ರೀತಿಯಲ್ಲಿ ಮಾಡಿದ ತರಕಾರಿ ಪಲ್ಯ, ಮಾವಿನ ಉಪ್ಪಿನಕಾಯಿ, ಜೊತೆಗೆ ಕಾವಲಿಯ ಮೇಲೆ ಮಸಾಲೆ ಬೆರೆಸಿ ತೆಂಗಿನ ಎಣ್ಣೆಯಲ್ಲಿ ಕಾಯಿಸಿ ತಂದ ಬಂಗುಡೆ, ಭೂತಾಯಿ, ಮುರುವಿನಂತಹ ಮೀನುಗಳನ್ನು ದೊಡ್ಡ ಹರಿವಾಣದಲ್ಲಿ ನಿಮ್ಮ ಆಯ್ಕೆಗಾಗಿ ಮುಂದಿಡಲಾಗುತ್ತದೆ. ನೀವು ಆಯ್ಕೆ ಮಾಡಿದ ಮೀನನ್ನು ನಿಮ್ಮ ಎಲೆಯ ಮೇಲೆ ಬಡಿಸಲಾಗುವುದು. ಇದಿಷ್ಟೇ ಈ ಹೋಟೆಲ್‌ನಲ್ಲಿ ಮಧ್ಯಾಹ್ನ ನಿಮಗೆ ಸಿಗೋದು. ದೇಜು ಬಡಿಸುವ ಈ ಊಟವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಅಧ್ಯಾಪಕರು, ವಿದ್ಯಾರ್ಥಿಗಳು, ಕುಲಪತಿಗಳು ಅನ್ಯ ಕಾರ್ಯನಿಮಿತ್ತ ವಿವಿಗೆ ಬರುವ ಅಧ್ಯಾಪಕರು ಚಪ್ಪರಿಸಿ ಉಂಡವರೆ. ಗುರುಗಳಾದ ಆಧುನಿಕತೆಯ ಕಾರಣದಿಂದಾಗಿ ಗ್ಯಾಸ್ ಒಲೆಯಲ್ಲಿ ಅಡುಗೆ ಮಾಡಿ ತಿಂದು ಅಭ್ಯಾಸವಿರುವ ಜನರಿಗೆ ದೇಜುವಿನ ಮೀನು ಪ್ರೈನೊಳಗೆ ಸೇರಿರುವ ಸೌದೆ ಒಲೆಯ ಹೊಗೆ ಸ್ವಲ್ಪ ಅಸಹಜ ರುಚಿಯನ್ನುಂಟುಮಾಡಬಹುದು.

ಅದೇ ರೀತಿ ವಿವಿ ಕ್ಯಾಂಪಸ್‌ನೊಳಗೆ ಭಟ್ಟರ ಹೋಟೆಲೊಂದಿತ್ತು. ಸುಮಾರು 70 ವರ್ಷ ಪ್ರಾಯದ ಭಟ್ಟರು ಅದೇ ಪ್ರಾಯದ ಅವರ ಮಡದಿ ಈ ಹೋಟೆಲ್ ನಡೆಸುತ್ತಿದ್ದರು. ಕೇವಲ 30 ರೂಪಾಯಿಗೆ ಅನ್ನ ಸಾರು, ಮಜ್ಜಿಗೆ ನೀಡುತ್ತಿದ್ದ ಭಟ್ಟರು ಅಗತ್ಯಕ್ಕಿಂತ ಹೆಚ್ಚು ಮಾತನಾಡುತ್ತಿರಲಿಲ್ಲ. ಅವರು ಕೊಡುವ ಹುಳಿಯಾದ ಒಗ್ಗರಣೆ ಹಾಕಿದ ಮಸ್ತ್ ಮಜ್ಜಿಗೆಯನ್ನು ಕುಡಿಯುವ ಬಾಯಿ ಚಪಲದಿಂದ ನನ್ನ ಗೆಳೆಯರ ಜೊತೆಗೆ ಅಲ್ಲಿಗೆ ಹೋಗುತ್ತಿದ್ದೆ. ಕೊಪ್ಪಳ ಜಿಲ್ಲೆಯ ಸಹಪಾಠಿ ದೊಡ್ಡಶಿವಕುಮಾರ್ ಆರಂಭದಲ್ಲಿ ಭಟ್ಟರು ಕೊಡುವ ಕುಚುಲಕ್ಕಿಯನ್ನು ತಿಂದು ಅರಗಿಸಿಕೊಳ್ಳಲಾಗದೆ ತಾನೇ ಮನೆಯಿಂದ ಬೆಳ್ತಕ್ಕಿ ಅನ್ನ ತರಲಾರಂಭಿಸಿದ. ಶಿವಕುಮಾರ್ ಸಾರಿಗಾಗಿ ಭಟ್ಟರಿರಲ್ಲಿ ಬೇಡಿಕೆ ಇಟ್ಟಾಗ ನಮಗೆಲ್ಲಾ ಊಟಕ್ಕಿಕ್ಕಿದ ಭಟ್ಟರು ದೊಡ್ಡ ಶಿವಕುಮಾರನ ಕ್ಯಾರಿಯರ್ ಕಡೆಗೆ ನೋಡಲೇ ಇಲ್ಲ. ಎರಡು ಬಾರಿ ಮೂರು ಬಾರಿ ಸಾರಿಗೆ ಬೇಡಿಕೆ ಇಡುತ್ತಲೇ ಹೋದ ಶಿವಕುಮಾರನಿಗೆ ನಿರಾಸೆಯ ಜೊತೆಗೆ ಬೈಗುಳದ ಮಹಾಭಿಷೇಕ ದೊರೆಯಿತು. ಹೊರಗಿನ ಅನ್ನ ತಂದದ್ದೆ ಮಹಾಪರಾಧವೆಂಬಂತೆ ವರ್ತಿಸಿ ಕೋಪದಲ್ಲೇ ನಮ್ಮನ್ನಟ್ಟಿದ್ದರು. ಮಾರನೇ ದಿನ ಅವರ ಮಜ್ಜಿಗೆಯ ಸ್ವಾದ ಸವಿಯುವ ಉದ್ದೇಶದಿಂದ ಊಟಕ್ಕೆ ಹೋದ ನಮಗೆ ಬಾಗಿಲು ಮುಚ್ಚಿದ ಭಟ್ಟರ ಹೋಟೆಲ್ ಕಾಣಿಸಿ ನಿರಾಸೆಯಿಂದ ಹಿಂದಿರುಗುವಾಗ ಪಕ್ಕದ ಅಂಗಡಿಯಾತ ಹೇಳಿದ ಮಾತು ಕೇಳಿ ಆಕಾಶವೇ ತಲೆಯ ಮೇಲೆ ಬಿದ್ದಂತಾಗಿತ್ತು. ಅಂಗಡಿಯಾತ ಹೇಳಿದಿಷ್ಟು, 'ನಿನ್ನೆ ದಿನ ಯಾರೋ ಹುಡುಗರ ಜೊತೆಯಲ್ಲಿ ಜಗಳವಾಡಿದ ಭಟ್ಟರು ಬಿಪಿ ಏರಿಸಿಕೊಂಡು ಆಸ್ಪತ್ರೆ ಸೇರಿದ್ದಾರೆ. ದೇವರ ದಯೆಯಿಂದ ಪ್ರಾಣಾಪಾಯವೇನೂ ಇಲ್ಲ. ಇನ್ನೊಂದು ವಾರ ಹೋಟೆಲ್‌ಗೆ ರಜೆ. ಅವರು ಬಂದ ಮೇಲೆ ಬನ್ನಿ' ಎಂದರು. ಅಂಗಡಿಯವನಿಗೆ ನಾವೇ ಆ ಜಗಳಕ್ಕೆ ಕಾರಣವಾದ ಹುಡುಗರು ಎಂದು ಹೇಳಬೇಕೆನಿಸಿದರೂ